ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2019–20 ದಿನಾಂಕ: 19–10–2019

## ಪತ್ರಿಕಾ ಆಮಂತ್ರಣ

1. ಮಹಾ ನಿರ್ದೇಶಕರು ಮತ್ತು ಅರಕ್ಷಕ ಮಹಾ ನಿರೀಕ್ಷಕರು ಕರ್ನಾಟಕ ರಾಜ್ಯ ಹಾಗೂ ರಾಜ್ಯದ ಸಮಸ್ತ ಪೊಲೀಸ್ ಅಧಿಕಾರಿಗಳ ವತಿಯಿಂದ "ಪೊಲೀಸ್ ಸಂಸ್ಮರಣ ದಿನಾಚರಣೆ" ಕಾರ್ಯಕ್ರಮ:

ಮುಖ್ಯ ಅತಿಥಿಗಳಾಗಿ:

ಶ್ರೀ ಬಿ.ಎಸ್. ಯಡಿಯೂರಪ್ಪ,
ಮುಖ್ಯಮಂತ್ರಿಗಳು

ಅಧ್ಯಕ್ಷತೆ:

ಶ್ರೀ ಬಸವರಾಜ ಬೊಮ್ಮಾಯಿ,
ಗೃಹ ಸಚಿವರು

ದಿನಾಂಕ: 21–10–2019, ಸೋಮವಾರ ಸಮಯ : ಬೆಳಿಗ್ಗೆ 8–00 ಗಂಟೆಗೆ.

ಸ್ಥಳ: ನಗರ ಸಶಸ್ತ್ರ ಮೀಸಲು ಪಡೆ, ಕೇಂದ್ರಸ್ಥಾನದ ಹುತಾತ್ಮರ ಉದ್ಯಾನವನ,
ಮೈಸೂರು ರಸ್ತೆ, ಬೆಂಗಳೂರು.

2. ಕಾರಗೃಹ ಮತ್ತು ಸುಧಾರಣಾ ಸೇವೆ ಇಲಾಖೆ ವತಿಯಿಂದ ಸನ್ನಡತೆ ಬಂದಿಗಳ ಬಿಡುಗಡೆ, ರಾಷ್ಟ್ರಪತಿಗಳ ಮತ್ತು ಮುಖ್ಯಮಂತ್ರಿಗಳ ಪದಕ ಪ್ರದಾನ, 'ಬೆಂಗಳೂರು ರೇಡಿಯೋ' ಪ್ರಾರಂಭ, ನೂತನ ಸಭಾಂಗಣ ಉದ್ಘಾಟನೆ ಹಾಗೂ ಕೌಶಲ್ಯ ತರಬೇತಿಗೆ ಚಾಲನೆ:

ಮುಖ್ಯ ಅತಿಥಿಗಳು:

ಶ್ರೀ ಬಸವರಾಜ ಬೊಮ್ಮಾಯಿ,
ಗೃಹ ಸಚಿವರು

ವಿಶೇಷ ಅತಿಥಿಗಳು:

ಶ್ರೀ ಡಿ. ಕೆ. ಸುರೇಶ್

ಲೋಕಸಭಾ ಸದಸ್ಯರು.
ಬೆಂಗಳೂರು ಗ್ರಾಮಾಂತರ

**ಅಧ್ಯಕ್ಷತೆ:**

ಶ್ರೀ ಎಂ. ಕೃಷ್ಣಪ್ಪ, ಶಾಸಕರು.
ಬೆಂಗಳೂರು ದಕ್ಷಿಣ, ಬೆಂಗಳೂರು.

ದಿನಾಂಕ: 21–10–2019 ಸೋಮವಾರ ಸಮಯ : ಬೆಳಿಗ್ಗೆ 11–00 ಗಂಟೆಗೆ.

ಸ್ಥಳ: ಕೇಂದ್ರ ಕಾರಾಗೃಹ, ಪರಪ್ಪನ ಅಗ್ರಹಾರ, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು.

ಸೂಚನೆ: ಈ ಕಾರ್ಯಕ್ರಮಕ್ಕೆ ಮಾಧ್ಯಮ ಪ್ರತಿನಿಧಿಗಳನ್ನು ಕರೆದೊಯ್ಯಲು ವಾಹನ ವ್ಯವಸ್ಥೆ ಮಾಡಲಾಗಿದ್ದು, ವಾಹನವು ಅಂದು ಬೆಳಿಗ್ಗೆ 8–30 ಗಂಟೆಗೆ ಕಬ್ಬನ್ ಉದ್ಯಾನವನದಲ್ಲಿರುವ ಪ್ರೆಸ್‌ಕ್ಲಬ್ ಆವರಣದಿಂದ ನಿಗದಿತ ಸ್ಥಳದತ್ತ ಹೊರಡಲಿದೆ.

ಸಂಪರ್ಕ: ಶ್ರೀ ಮೋಹನ್ ಕುಮಾರ್, ಸಹಾಯಕ ಅಧೀಕ್ಷಕರು
ಮೊಬೈಲ್ ಸಂ: 9480806417/8050101988.

## SPECIAL MEDIA INVITATION

The Minister for Home Mr Basavaraj Bommai will be the Chief Guest at the Release of Prisoners with Good Character , Presentation of President's and Chief Minister's Medal, Launch of Bengaluru Radio, Inauguration of an Auditorium and Commencement of Skill Training Programme on October 21 at 11-00 A M at Central Prison at Parappana Aagrahara in Bengaluru.

The Legislator from Bengaluru South Mr M Krishnappa will preside over at this function, at which many dignitaries including the Member of Parliament from Bengaluru Rural Mr D K Suresh are also scheduled to participate.

Vehicle arrangement has been made to take Media Persons to this Programme. The vehicle, arranged by the Department of Prisons and Reform Services will leave towards the destination at 8-30 A M from the Press Club of Bengaluru in Cubbon Park on that day.

Media Persons may contact Assistant Superintendent Mr Mohan Kumar in his Mobile Numbers : 94808 06417 or 80501 01988 for further information.

Media Persons, representing Electronic and Print Media, are requested to kindly attend and give wide coverage to this special function.

D. P. MURALIDHAR
DEPUTY DIRECTOR (NEWS)

**3. <u>ಪತ್ರಿಕಾಗೋಷ್ಠಿ:</u>**

**"66 ನೇ ಅಖಿಲ ಭಾರತ ಸಹಕಾರ ಸಪ್ತಾಹ ಪೂರ್ವಭಾವಿ ಸಭೆ"**

**<u>ಅಧ್ಯಕ್ಷತೆ:</u>**

**ಶ್ರೀ ಬಸವರಾಜ ಬೊಮ್ಮಾಯಿ,**
**ಗೃಹ ಸಚಿವರು**

**ದಿನಾಂಕ: 21-10-2019 ಸೋಮವಾರ ಸಮಯ : ಮಧ್ಯಾಹ್ನ 3-00 ಗಂಟೆಗೆ.**

**ಸ್ಥಳ: ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಆಡಳಿತ ಕಚೇರಿ ಕಟ್ಟಡ, 4ನೇ ಮಹಡಿ, ಚಾಮರಾಜಪೇಟೆ, ಬೆಂಗಳೂರು.**

**4. ಕರ್ನಾಟಕ ವಿಧಾನಮಂಡಲದ 2019-20 ನೇ ಸಾಲಿನ ಗ್ರಂಥಾಲಯದ ಪ್ರಾರಂಭಿಕ ಸಮಿತಿ ಸಭೆ:**

**<u>ಅಧ್ಯಕ್ಷತೆ:</u>**

**ಕೆ. ಪ್ರತಾಪಚಂದ್ರ ಶೆಟ್ಟಿ,**
**ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು ಹಾಗೂ ಗ್ರಂಥಾಲಯ ಸಮಿತಿಯ ಅಧ್ಯಕ್ಷರು**

**ದಿನಾಂಕ: 21-10-2019 ಸೋಮವಾರ ಸಮಯ : ಮಧ್ಯಾಹ್ನ 3-00 ಗಂಟೆಗೆ.**

**ಸ್ಥಳ: ವಿಧಾನಸೌಧದ ನೆಲಮಹಡಿಯಲ್ಲಿರುವ ಕರ್ನಾಟಕ ವಿಧಾನಮಂಡಲದ ಇ-ಗ್ರಂಥಾಲಯ, ಕೊಠಡಿ ಸಂಖ್ಯೆ 28, ಬೆಂಗಳೂರು**

**ಸೂಚನೆ: ಛಾಯಾಗ್ರಾಹಕರು ಹಾಗೂ ವೀಡಿಯೋಗ್ರಾಫರ್‌ಗಳಿಗೆ ಸಭೆಯ ಮೊದಲ ಮೂರು ನಿಮಿಷಗಳು ಮಾತ್ರ ಚಿತ್ರಗಳನ್ನು ಸೆರೆಹಿಡಿಯಲು ಅವಕಾಶವಿದೆ.**

**5. <u>ಪತ್ರಿಕಾಗೋಷ್ಠಿ:</u>**

**ಕಾರ್ಮಿಕ ಸಮಸ್ಯೆಗಳು ಹಾಗೂ ಇಲಾಖೆ ಸಂಬಂಧಿಸಿದ ಇತರ ವಿಷಯಗಳ ಕುರಿತು**

**<u>ನಡೆಸುವವರು:</u>**

**ಶ್ರೀ ಎಸ್. ಸುರೇಶ್ ಕುಮಾರ್,**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಕಾರ್ಮಿಕ ಸಚಿವರು.**

**ದಿನಾಂಕ: 21-10-2019 ಸೋಮವಾರ ಸಮಯ : ಸಂಜೆ 4-00ಗಂಟೆಗೆ.**

**ಸ್ಥಳ: ಕೊಠಡಿ ಸಂಖ್ಯೆ 318, 3ನೇ ಮಹಡಿ, ವಿಕಾಸಸೌಧ, ಬೆಂಗಳೂರು.**

## <u>ಪತ್ರಿಕಾ ಪ್ರಕಟಣೆ</u>

## <u>ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಭಾರತೀಯ ಸ್ಟೇಟ್ ಬ್ಯಾಂಕ್ ವತಿಯಿಂದ ದೇಣಿಗೆ</u>

**ಬೆಂಗಳೂರು, ಅಕ್ಟೋಬರ್ 19, (ಕರ್ನಾಟಕ ವಾರ್ತೆ)**

**ಮುಖ್ಯಮಂತ್ರಿಗಳ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ಭಾರತೀಯ ಸ್ಟೇಟ್ ಬ್ಯಾಂಕ್ ವತಿಯಿಂದ 1 ಕೋಟಿ ರೂಪಾಯಿ ದೇಣಿಗೆಯನ್ನು ಸಲ್ಲಿಸಿದೆ.**

**ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಪಿ.ಕೆ. ಗುಪ್ತಾ ಅವರು ಕರ್ನಾಟಕ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರನ್ನು ದಿನಾಂಕ: 19-10-2019 ರಂದು ಭೇಟಿಯಾಗಿ ದೇಣಿಗೆಯ 1 ಕೋಟಿ ರೂಪಾಯಿ ಚೆಕ್‌ಅನ್ನು ಹಸ್ತಾಂತರಿಸಿದರು.**

**ಇದೇ ಸಂದರ್ಭದಲ್ಲಿ ಸ್ಟೇಟ್ ಬ್ಯಾಂಕ್ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಅಭಿಜಿತ್ ಮುಜೂಂದಾರ್ ಹಾಗೂ ಜನರಲ್ ಮ್ಯಾನೇಜರ್ ಶ್ರೀ ವಿನ್ಸೆಂಟ್ ಎಂ.ಡಿ ಅವರು ಉಪಸ್ಥಿತರಿದ್ದರು.**

## STATE BANK OF INDIA DONATED RS ONE CRORE TO C.M'S FLOOD RELIEF FUND

Bengaluru Oct 19, (Karnataka Information)

State Bank of India donated Rs One Crore to C.M's Flood Relief Fund. Shri P.K. Gupta, Managing Director, State Bank of India met

Karnataka Chief Minister Shri B. S. Yediyurappa on 19-10-2019 and handed over the Cheque of Rs. One Crore.

Shri Abijith Mujumder, Chief General Manager and Shri Vincent M.D, General Manager network - 1 of State Bank of India, Bengaluru Circle were also present on the occasion.
(Photos enclosed)

## ಎಸ್.ಎಸ್.ಎಲ್.ಸಿ. ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿ ಪ್ರಕಟ

**ಬೆಂಗಳೂರು, ಅಕ್ಟೋಬರ್ 19, (ಕರ್ನಾಟಕ ವಾರ್ತೆ)**

**ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ಮಾರ್ಚ್/ಏಪ್ರಿಲ್– 2020 ರ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ದಿನಾಂಕ: 20–3–2020 ರಿಂದ 03–04–2020 ರವರೆಗೆ ನಡೆಸಲು ತೀರ್ಮಾನಿಸಲಾಗಿದ್ದು, ಅದರಂತೆ ತಾತ್ಕಾಲಿಕ ವೇಳಾಪಟ್ಟಿಯನ್ನು ಸಿದ್ದಪಡಿಸಿ ಮಂಡಳಿಯ ಅಂತರ್ಜಾಲದಲ್ಲಿ (www.kseeb.kar.nic.in) ಪ್ರಕಟಿಸಲಾಗಿದೆ.**

**ಸದರಿ ವೇಳಾಪಟ್ಟಿಗೆ ಅಭ್ಯರ್ಥಿಗಳು ಆಕ್ಷೇಪಣೆ ಸಲ್ಲಿಸಲು ದಿನಾಂಕ: 21–10–2019 ರಿಂದ 19–11–2019 ರವರೆಗೆ ಅವಕಾಶ ಕಲ್ಪಿಸಲಾಗಿದೆ. ಅಕ್ಷೇಪಣೆಗಳಿದ್ದಲ್ಲಿ ನಿರ್ದೇಶಕರು (ಪರೀಕ್ಷೆಗಳು) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003 ಇವರಿಗೆ ನೇರವಾಗಿ ಅಂಚೆ ಮೂಲಕ ಸಲ್ಲಿಸಬಹುದಾಗಿದೆ ಎಂದು ನಿರ್ದೇಶಕರು (ಪರೀಕ್ಷೆಗಳು) ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

## ಕಬ್ಬನ್ ಉದ್ಯಾನವನದಲ್ಲಿ ಈ ಭಾನುವಾರ

**ಬೆಂಗಳೂರು, ಅಕ್ಟೋಬರ್ 19, (ಕರ್ನಾಟಕ ವಾರ್ತೆ)**

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು

ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. **ದಿನಾಂಕ: 20-10-2019** ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಕಬ್ಬನ್ ಉದ್ಯಾನವನದ ಆವರಣದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ **ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

2) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

**I ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ**

- ಬೆಳಿಗ್ಗೆ 7.00 ಗಂಟೆಯಿಂದ ಬೆಳಿಗ್ಗೆ 8.00 ಗಂಟೆಯವರೆಗೆ **ಯೂನಿವರ್ಸ್ ಆರ್ಟ್ ಫೌಂಡೇಶನ್** ಸಂಸ್ಥೆಯ ಸಹಯೋಗದೊಂದಿಗೆ **ಸ್ವಪ್ನ ಆಂಥೋನಿ ರವರಿಂದ ಭರತನಾಟ್ಯ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

## ಸಚಿವರ ಪ್ರವಾಸ

**ಬೆಂಗಳೂರು, ಅಕ್ಟೋಬರ್ 19, (ಕರ್ನಾಟಕ ವಾರ್ತೆ)**

ಕಂದಾಯ ಹಾಗೂ ಪೌರಾಡಳಿತ ಸಚಿವರು ಹಾಗೂ ಬೆಂಗಳೂರು ಗ್ರಾಮಾಂತರ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಆರ್. ಅಶೋಕ್ ಅವರು ಅಕ್ಟೋಬರ್ 21 ರಂದು ಮಂಗಳೂರಿಗೆ ಪ್ರವಾಸ ನಡೆಸಿ, ಅಂದೇ ನಗರಕ್ಕೆ ಹಿಂದಿರುಗಲಿದ್ದಾರೆ.

**ಬೆಂಗಳೂರು, ಅಕ್ಟೋಬರ್ 19, (ಕರ್ನಾಟಕ ವಾರ್ತೆ)**

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆ ಸಚಿವರಾದ ಶ್ರೀ ಜಗದೀಶ್ ಶೆಟ್ಟರ ಅವರು ಅಕ್ಟೋಬರ್ 21 ರಂದು ಕೊಪ್ಪಳ ಹಾಗೂ ಹುಬ್ಬಳಿಗೆ ಪ್ರವಾಸ ಕೈಗೊಂಡು ಅಂದೇ ನಗರಕ್ಕೆ ಹಿಂದಿರುಗಲಿದ್ದಾರೆ.